ಒ. ಎಸ್ ನಂ. 210/2018
ಪಿಡಬ್ಲೂ-1

ದಿನಾಂಕಃ 10.07.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

ಪಾಟೀ ಸವಾಲು :- ಶ್ರೀ. ಪ್ರತಿವಾದಿ ಪರ ವಕೀಲರಿಂದಃ

ಕೇಸಿನ ಬಗ್ಗೆ ತಿಳಿದುಕೊಂಡಿರುತ್ತೇನೆ. ಕೆಳವೆ ಬಾವಿಯಿಂದ ನೀರು ಬಿಡಬೇಕೆಂದು ದಾವೆ ಸಲ್ಲಿಸಿರುತ್ತೇನೆ. ನನ್ನ ಜಮೀನಿನಲ್ಲಿ ನಿಗಮದಿಂದ ಕೊಳವೆ ಬಾವಿ ಕೊರೆಸಿರುತ್ತೇನೆ. ಸ. ನಂ 111/2 ರಲ್ಲಿ ಕೊಳೆವೆ ಬಾವಿ ಕೊರಸಿ ಅದಕ್ಕೆ ಪಂಪ್ ಸೆಟ್ ಅಳವಡಿಸಿರುತ್ತೇನೆ. ದಾವಾ ಸ್ವತ್ತು ನನ್ನ ಜಮೀನು ಆಗಿರುತ್ತದೆ. ಪ್ರತಿವಾದಿ 01 ರವರು ಕೊಳವೆ ಬಾವಿಯಿಂದ ನೀರು ಬಿಡಬೇಕೆಂದು ಕೇಳುತ್ತಿದ್ದೇನೆ. ಪ್ರತಿವಾದಿ 01 ರವರು ನಮ್ಮ ಜಮೀನಿನಲ್ಲಿರುವ ಇರುವ ಕೊಳವೆ ಬಾವಿಯಿಂದ ನೀರು ಬಿಡಲು ನಿರಾಕರಿಸಿರುತ್ತಾರೆ. ನಿಮ್ಮ ಜಮೀನಿನಲ್ಲಿ ಕೊಳವೆ ಬಾವಿ ಕೊರಸಿದ್ದೀರಾ ಎಂದರೆ ನನ್ನ ಮತ್ತು ಪ್ರತಿವಾದಿ ಒಟ್ಟು ಕುಟುಂಬದ ಆಸ್ತಿಯಾಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಜಮಿನಿನಲ್ಲಿ ನಿಗಮದಿಂದ ಬೊರ್ ವೆಲ್ ಹಾಕಿಸಿದಾಗ ನೀರು ಬಂದಿರುವುದಿಲ್ಲ. ಸ. ನಂ.111/2 ರಲ್ಲಿ ಪಂಪ್ ಸೆಟ್ ಇರುವುದಿಲ್ಲ. ಪಕ್ಕದ ಜಮೀನಿನಲ್ಲಿ ಇರುತ್ತದೆ ಸ. ನಂ. ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ನನ್ನ ಪಿತ್ರಾರ್ಜಿತ ಸ್ವತ್ತಾಗಿರುತ್ತದೆ. ಸದರಿ ಜಮೀನಿನನ್ನು ಹಂಚಿಕೆ ಮಾಡಿಕೊಂಡಿರುವುದಿಲ್ಲ. ದಾವಾ ಸ್ವತ್ತು ನನ್ನ ಹೆಸರಿನಲ್ಲಿ ಇರುತ್ತದೆ.

ಸ. ನಂ.111/2 ರಲ್ಲಿ ಒಟ್ಟು 3 ಎಕರೆ ಇದ್ದು ನಾನು ಮತ್ತು ಪ್ರತಿವಾದಿ 1 ರವರು ಹಂಚಿಕೆ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಸ. ನಂ 76/2 ರಲ್ಲಿ ನನಗೆ ಭಾಗ ಬಂದಿರುತ್ತದೆ ಎಂದರೆ ಸರಿ. ಸದರಿ ಸ್ವತ್ತಿನಲ್ಲಿ 1 ಎಕರೆ 3 ಗುಂಟೆಯಂತೆ ನನಗೂ ಮತ್ತು ಪ್ರತಿವಾದಿ 1 ರವರಿಗೆ ಹಂಚಿಕೆಯಾಗಿರುತ್ತದೆ ಎಂದರೆ ಸರಿ. ಸದರಿ ಸ್ವತ್ತಿನಲ್ಲಿ ಪಂಪ್ ಸೆಟ್ ಇರುವುದಿಲ್ಲ. ಸ. ನಂ. 76/2 ಪ್ರತಿವಾದಿಯ ಸ್ವತ್ತಿನಲ್ಲಿ ಕೂಡ ಪಂಪ್ ಸೆಟ್ ಇರುವುದಿಲ್ಲ. ಸ. ನಂ.111/2 ಮತ್ತು 76/2 ಸ್ವತ್ತುಗಳನ್ನು ಹಂಚಿಕೆ ಮಾಡಿಕೊಂಡು ನಮ್ಮ ಹೆಸರಿನಲ್ಲಿ ಖಾತೆ ನಮೂದಾಗಿರುತ್ತದೆ ಎಂದರೆ ಸರಿ. ಸ. ನಂ.111/2 ರಲ್ಲಿ ಬೋರ್ ವೆಲ್ ಹಾಕಿಸಿರುವುದಿಲ್ಲ ಸ. ನಂ.76/2 ರಲ್ಲಿ ಬೋರ್ ವೆಲ್ ಇರುತ್ತೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಬೋರ್ ವೆಲ್ ಇರುವುದಿಲ್ಲ ಎಂದರೆ ಸರಿ.ದಾವಾ ಸ್ವತ್ತಿನಲ್ಲಿ ಯಾವುದೇ ಬೋರ್ ವೆಲ್ ಇಲ್ಲದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ದಾವಾ ಸಲ್ಲಿಸಿದ್ದೇನ ಎಂದರೆ ಸರಿಯಲ್ಲ. ಬೋರ್ ವೆಲ್ ಹಾಕುವ ಸಮಯದಲ್ಲಿ ನನ್ನಿಂದ ಯಾವುದೇ ಒಪ್ಪಿಗೆ ಪತ್ರ ಬರೆಸಿಕೊಂಡಿಲ್ಲ ಎಂದರೆ ಸರಿಯಲ್ಲ. ಸದರಿ ಒಪ್ಪಿಗೆ ಪತ್ರವನ್ನು ಹಾಜರುಪಡಿಸಿರುತ್ತೇನೆ. ದಾವಾ ಸ್ವತ್ತಿನಲ್ಲಿ ಬೋರ್ ವೆಲ್ ಹಾಕಿಸಿಲ್ಲ ಎಂದರೆ ಸರಿ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

2 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ